ತರಹಾರಿ ತರುವುದಕ್ಕೆ, ಇದಕ್ಕೆಲ್ಲಾ ಉಪಯೋಗಿಸುತ್ತಿದ್ದಾರೆ. ಇದು ನಮ್ಮ ಪರಿಸ್ಥಿತಿ. ದಯವಿಟ್ಟು ಇದರ ಬಗ್ಗೆ ತಾವು ಗಂಭೀರವಾಗಿ ಪರಿಗಣಿಸಬೇಕು ಮತ್ತು ಕೊನೆಯಪಕ್ಷ ನಿಮ್ಮ ಈ ಅವಧಿ ಮುಗಿಯುವುದರೊಳಗೆ ಅವರಿಗೆ ನೇಮಕಾತಿ ಮಾಡಿದರೆ ಬಹುಶಃ ನಿಮಗೆ ಮತ್ತು ಇಡೀ ಸರ್ಕಾರಕ್ಕೆ ಅನುಕೂಲವಾಗಬಹುದು.

ಶ್ರೀ ಬಿ. ಸೋಮಶೇಖರ್ :— ಮಾನ್ಯ ಸಭಾಧ್ಯಕ್ಷರೇ, ನಾನು ಮೊದಲೇ ಹೇಳಿದೆ. ಅವರ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೋ ಅದಕ್ಕೂ ಹೆಚ್ಚಾಗಿ ನಮಗೆ ಇದೆ. ಆದರೆ, ಈ ಬಡವರುಗಳಿಗೆ ಸಹಾಯ ಮಾಡಬೇಕೆಂದಾಗ, ಅಷ್ಟು ಸುಲಭವಾಗಿ ಮಾಡತಕ್ಕ ವ್ಯವಸ್ಥೆ ನಮ್ಮಲ್ಲಿ ಇಲ್ಲ. ನಾವು ಮುಖ್ಯಮಂತ್ರಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಅವರು ಸೂಕ್ತವಾದ ತೀರ್ಮಾನವನ್ನು ಆದಷ್ಟು ಬೇಗ ತೆಗೆದುಕೊಳ್ಳುತ್ತಾರೆ, ನಾವು ಕೂಡ ಒತ್ತಡ ತರುತ್ತೇವೆಂಬ ಮಾತನ್ನು ಹೇಳುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ :— ಪಕ್ಷಾತೀತವಾಗಿ, ಇವರ ಬಗ್ಗೆ ಮಾನ್ಯ ಸದಸ್ಯರೆಲ್ಲರಿಗೂ ಕಳಕಳಿ ಇದೆ. ಆದ್ದರಿಂದ ನಾವು ರಿಕ್ವೆಸ್ಟ್ ಮಾಡುತ್ತಿದ್ದೇವೆ.

ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನಿಂದ ರೈತರ ಬಾವಿಗಳಿಗೆ ಸಾಲ ಸೌಲಭ್ಯ.

334(2201) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಸಹಕಾರ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನವರು ರೈತರ ಬಾವಿಗಳಿಗೆ ಸಾಲ ಕೊಡುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸರ್ಕಾರ ವಿಫಲ ಬಾವಿಗಳಿಗೆ ರೈತರ ಸಾಲ ವಜಾ ಮಾಡಿ ಅಂತಹ ಹಣವನ್ನು ತಾನೇ ಭರಿಸುತ್ತಿದ್ದುದು ನಿಜವೇ?

ಇ) ಹಾಗಿದ್ದಲ್ಲಿ 1993-94 ರಲ್ಲಿ ಮೇಲೆ ತಿಳಿಸಿದ ಬ್ಯಾಂಕಿನಿಂದ ಗುರ್ತಿಸಲಾದ ವಿಫಲ ಬಾವಿಗಳ ಸಂಖ್ಯೆ ಎಷ್ಟು?

ಈ) ಹಾಗೇ ಗುರ್ತಿಸಿದ ಬಾವಿಗಳಿಗೆ ಸರ್ಕಾರದಿಂದ ಹಣ ಪಾವತಿಸಲಾಗಿದೆಯೇ?

ಉ) ಹಾಗಿಲ್ಲದಿದ್ದಲ್ಲಿ ರೈತರಿಂದ ಬರಬೇಕಾದ ಸಾಲವನ್ನು ಬೇಬಾಕಿ ಮಾಡಿ ಬ್ಯಾಂಕಿನವರು ತೀರ್ಮಾನ ಮಾಡಿರುವುದು ನಿಜವೇ?

ಶ್ರೀ ಎಸ್. ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ನಿಜ

ಆ) ನಿಜ

ಇ) 45

ಈ) ಇಲ್ಲ. ಯಾಕೆಂದರೆ ಮಂಜೂರಾತಿ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿಲ್ಲ.

ಉ) ಇಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕು. ಒಂದೆರಡು ವಿವರಗಳನ್ನು ತಮಗೆ ಕೊಡಬೇಕಾಗಿದೆ. ಈಗ ಅವರು ಇಲ್ಲಿ ಕುಳಿತಿದ್ದರಲ್ಲಾ, ಇದೇ ರೀತಿ ಆಡಳಿತದಲ್ಲೂ ಕುಳಿತುಬಿಟ್ಟಿದ್ದಾರೆ. ಸ್ವಾಮಿ, ಈ ಪ್ರಶ್ನೆ ಕೇಳುವುದಕ್ಕೆ ಮೊದಲೇ ಪಿ.ಎಲ್.ಡಿ. ಬ್ಯಾಂಕ್ ಆಡಿಟ್ ರಿಪೋರ್ಟ್‌ನ್ನು ನಾನು ಓದಿದ್ದೇನೆ. ಜನರಲ್‌ಬಾಡಿಯಲ್ಲಿ ಕೂತು ಮಾತನಾಡಿದ್ದೇನೆ. ಅಲ್ಲಿರತಕ್ಕ ಸಿಬ್ಬಂದಿಯಿಂದ ನಾನು ಮಾಹಿತಿಯನ್ನು ಶೇಖರಣೆ ಮಾಡಿದ್ದೇನೆ. ಚಿಕ್ಕನಾಯ್ಕನಹಳ್ಳಿ ಪಿ.ಎಲ್.ಡಿ. ಬ್ಯಾಂಕಿನಲ್ಲಿ 1993-94ನೇ ಸಾಲಿನಲ್ಲಿ 97 ವಿಫಲ ಬಾವಿಗಳ ಬಗ್ಗೆ ವೀಕ್ಷಣೆ ನಡೆದು ಒಂದು ತಾತ್ಕಾಲಿಕವಾದ ತೀರ್ಮಾನಕ್ಕೆ ಬಂದಿದ್ದರು. ಬಾವಿ ವಿಫಲ ಆಯಿತು ಎಂದು ಕಮಿಟಿ ತೀರ್ಮಾನ ತೆಗೆದುಕೊಂಡ ನಿಮ್ಮ ಸ್ಟ್ಯಾಫ್ ರೈತರ ಹತ್ತಿರ ಎರಡು ಸಾವಿರ, ಐದು ಸಾವಿರ ಹಣ ಇಟ್ಟು ಕೊಂಡುಬಿಟ್ಟು, ಅವರಿಗೆ ನಿಮ್ಮದು ಈ ಬಾವಿ ಸಾಲ ಇಲ್ಲ ಎಂದು ಎನ್.ಡಿ.ಸಿ. ಕೊಟ್ಟುಬಿಟ್ಟರು. ಆವತ್ತಿನಿಂದ ಇವತ್ತಿನವರೆಗೆ ಡಿಮ್ಯಾಂಡ್ ಮಾಡಲಿಲ್ಲ. ಇವರ ಗ್ರಹಚಾರಕ್ಕೆ ಅಲ್ಲಿದ್ದ ಜಿಯಾಲಿಜಿಸ್ಟ್ ವರ್ಗಾವಣೆಯಾಗಿ ಹೋಗಿಬಿಟ್ಟ. ಇವರು ಅವನಿಗೆ ದುಡ್ಡು ಕೊಡಲಿಲ್ಲ. ಆತ ಸೈನ್ ಹಾಕಲಿಲ್ಲ. ಬೀದರ್‌ಗೋ ಅಥವಾ ಬಿಜಾಪುರಕ್ಕೋ ರೆಕಾರ್ಡ್ ಕಳುಹಿಸಿದೆವು. ಆ ರೆಕಾರ್ಡ್ ಪತ್ತೆ ಇಲ್ಲವೆಂದು ಜನರಲ್‌ಬಾಡಿಯಲ್ಲಿ ಹೇಳಿರುವುದಕ್ಕೆ, ಅವರ ಕೊಟ್ಟಿರುವ ಉತ್ತರವನ್ನು ತಾವು ತರಿಸಿ ಓದಬೇಕು. ನಾನು ಸಹಕಾರಿ; ನನಗೂ ಮಾನ ಮರ್ಯಾದೆ ಇದೆ. ಇಷ್ಟೊಂದು ನಿರ್ಲಕ್ಷ್ಯದ ಉತ್ತರವನ್ನು ನಿಮ್ಮಿಂದ ನಿರೀಕ್ಷೆ ಮಾಡಿರಲಿಲ್ಲ. ನೀವು ಒಂದು ಆಡಿಟ್ ರಿಪೋರ್ಟ್ ಓದುತ್ತೀರಾ? ಆ ಬ್ಯಾಂಕ್ ಏನಾಗಿದೆ ಎಂದು ನೋಡುತ್ತೀರಾ? ನಿಮ್ಮ ಈ ತೀರ್ಮಾನದಿಂದ ಚಿಕ್ಕನಾಯ್ಕನಹಳ್ಳಿ ಪಿ.ಎಲ್.ಡಿ. ಬ್ಯಾಂಕಿಗೆ 35 ಲಕ್ಷ ರೂ. ನಷ್ಟವಾಗಿದೆ ಎಂದು ಆಡಿಟ್ ರಿಪೋರ್ಟ್ ಕೊಟ್ಟರೆ, ಇಲ್ಲವೇ ಇಲ್ಲವೆಂದು ಹೇಳುತ್ತಾರೆ. ಇವರು ಆ ಕಮಿಟಿ ಮುಂದೆಯೇ ಬಂದಿಲ್ಲವೆಂದು ಬರೆದುಕೊಡುತ್ತಾರೆ. ನಾವು ಅಸೆಂಬ್ಲಿಗೆ ಬಂದು ಹುಡುಗಾಟಕ್ಕೆ ಪ್ರಶ್ನೆ ಕೇಳುತ್ತೇವೆಯೇ? 1993-94 ರಲ್ಲಿ ಈ ತೀರ್ಮಾನವಾಗಿ, ನೀವು ಸರ್ಕಾರಕ್ಕೆ ಬಿಲ್ ಮಾಡಿ ಕಳುಹಿಸದೇ, ವಿಫಲ ಬಾವಿಗಳ ಬಗ್ಗೆ ಇವತ್ತು ಕೇಳುವುದಕ್ಕೆ ಹೋದರೆ, ಇವತ್ತು ರೈತರ ಮನೆ ಹಾಳಾಗಿ ಹೋಗುತ್ತದೆ. ಇಲ್ಲ ಅಂದರೆ

ನಿಮ್ಮ 35 ಲಕ್ಷ ರೂಪಾಯಿಗಳನ್ನು ಬ್ಯಾಂಕಿಗೆ ಕೊಡಬೇಕಾಗುತ್ತದೆ ಅಲ್ಲಿ ಬ್ಯಾಂಕ್ ಇಟ್ಟುಕೊಂಡು ನಮ್ಮಂಥ ಷೇರ್ ಹೋಲ್ಡರುಗಳ ದುಡ್ಡನ್ನು ಏಕೆ ಹಾಳು ಮಾಡುತ್ತಿದ್ದೀರಿ ಎಂದು ಅವರಿಗೆ ಕೇಳುವುದಕ್ಕೆ ಬಯಸುತ್ತೇನೆ. ಅಕಸ್ಮಾತ್ ನಾನು ಹೇಳುವ ಮಾತು ನಿಜವಾಗಿದ್ದರೆ, ಅವತ್ತಿದ್ದ ಆಡಳಿತ ಮಂಡಳಿ, ಅವತ್ತಿದ್ದ ಸಿಬ್ಬಂದಿ ಮತ್ತು ಇವತ್ತು ಉತ್ತರಕೊಟ್ಟ ನಿಮ್ಮ ಆಡಳಿತ ಮಂಡಳಿ, ಮತ್ತು ಸಿಬ್ಬಂದಿ ಎರಡರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ತಮಗೆ ಶಕ್ತಿ ಇದೆಯೇ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಕೇಳಿದಹಾಗೆ ನಮಗೆ ಬಂದ ಮಾಹಿತಿ ಪ್ರಕಾರ ನಾವು ಉತ್ತರ ಕೊಟ್ಟಿರುವುದು ಸರಿ ಇದೆ. ಆದರೆ, ಅವರು ಎಲ್ಲಾ ನೋಡಿದ್ದೇನೆ, ಅದನ್ನು ಪರಿಶೀಲನೆ ಮಾಡಿದ್ದೇನೆ, ನನಗೆ ನೇರವಾಗಿ ಗೊತ್ತಿದೆ ಎಂದು ಹೇಳಿದ್ದಾರೆ. ಖಂಡಿತವಾಗಿಯೂ ಅದನ್ನು ವಿಚಾರಣೆ ಮಾಡಿಸಿ, ಅವರು ಹೇಳಿದ್ದೇ ಸರಿ ಇದ್ದರೆ, ಅವರೆಲ್ಲರ ಮೇಲೆ ಸೂಕ್ತ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಆಡಿಟ್ ವರದಿಯಲ್ಲಾಗಿರುವ ಆಕ್ಷೇಪಕ್ಕೆ ಒಂದು ಬ್ಯಾಂಕಿನವರು ಈ ರೀತಿ ಉತ್ತರ ಕಳುಹಿಸುತ್ತಾರೆಂದರೆ, ರೈತರ ಗತಿ ಏನಾಗಬೇಕು ಮತ್ತು ಸರ್ಕಾರದ ಗತಿ ಏನು? 1993-ರಿಂದ 1999 ರವರೆಗೆ ತಾವು ಬಡ್ಡಿಯನ್ನು ಕೊಡಬೇಕು. ಇಲ್ಲವೇ ಬ್ಯಾಂಕ್ ಕೊಡಬೇಕಾಗುತ್ತದೆ. ಈಗ ಚಿಕ್ಕನಾಯಕನಹಳ್ಳಿ ಪಿ.ಎಲ್.ಡಿ. ಬ್ಯಾಂಕ್ ಒಂದು ಕೋಟಿ ರೂ. ನಷ್ಟದಲ್ಲಿದೆ. ನೀವು ಹೇಳಿಬಿಡಿ. ಈ ಬಡ್ಡಿ ಏನಾದರೂ ನೀವೇ ಕೊಡುವುದಾದರೆ ನನ್ನದೇನೂ ಪ್ರಶ್ನೆ ಇಲ್ಲ. ಅವನು ಬರೆದಿದ್ದಾನೆ, 1993ಕ್ಕೆ ನೀವು ಬಿಲ್ ಮಾಡಲಿಲ್ಲ, ಈ ಅಮೌಂಟನ್ನು ಸರ್ಕಾರದಿಂದ ತಾತ್ವಿಕವಾಗಿ ನೀವು ಕೇಳುವುದಕ್ಕಾಗುವುದಿಲ್ಲ. ಈಗ ರೈತರು ಕೊಡುವುದಿಲ್ಲ. ರೈತರಿಗೆ ಎನ್.ಡಿ.ಸಿ. ಕೊಟ್ಟಿದ್ದೀರಿ. ನಿಮ್ಮ ಸಾಲ ಎಂದು ಬರೆದುಕೊಟ್ಟು ಬೇರೆ ಸಾಲ ಕೊಟ್ಟಿದ್ದೀರಿ, ಬೇರೆ ಬ್ಯಾಂಕ್‌ಗಳಲ್ಲಿ ಸಾಲಗಳನ್ನು ತೆಗೆದುಕೊಂಡಿದ್ದಾರೆ. 1993-94 ರಲ್ಲಿ ಇಂತಹ 97 ಪ್ರಕರಣಗಳು ಇವೆ. ಆಡಳಿತ ಮಂಡಳಿ ನಿದ್ದೆ ಹೊಡೆದಿದೆ. ಆ ಆಡಳಿತ ಮಂಡಳಿಯಲ್ಲಿ ಅವತ್ತು ಇದ್ದವರ ಮೇಲೆ ಕ್ರಮ ಜರುಗಿಸಬೇಕು. ಈಗ ಏನು ಆಡಿಟ್ ರಿಪೋರ್ಟ್ ಕೊಟ್ಟಿದ್ದಾರೆ, ಆ ಆಡಿಟ್ ರಿಪೋರ್ಟ್ ಸೇರಿದಂತೆ ಪೂರಾ ಆಡಿಟ್ ರಿಪೋರ್ಟ್‌ನ್ನು ತರಿಸಿಕೊಂಡು ನೋಡಿ, ಇದೇ ರೀತಿಯಲ್ಲಿ ಬೇರೆ ಬ್ಯಾಂಕ್‌ಗಳಲ್ಲಿ ನಿಷ್ಕ್ರಿಯವಾಗಿ ತೆಗೆದುಕೊಂಡಿರುವ ತೀರ್ಮಾನಗಳ ಮೇಲೆ ಕ್ರಮ ತೆಗೆದುಕೊಳ್ಳಲು ನೀವು ಸಮರ್ಥರಿದ್ದೀರಾ? ನಾವು ಸಮರ್ಥರು ಅಂದರೆ ಸಾಕು. ಏಕೆಂದರೆ ನನಗೆ ಗೊತ್ತು ತಾವು ಸಮರ್ಥರಲ್ಲ ಎಂದು ನೀವು ಒಂದಕ್ಕೆ ಸಮರ್ಥರು. ನಾನು ಸುಮಾರು 10 ಸಲ ಅವರ ಗಮನಕ್ಕೆ ತಂದಿದ್ದೇನೆ. ನಾವು ಎಷ್ಟು ಸಲ ಮಾತನಾಡಿದ್ದೇವೆ. ಒಬ್ಬರು ಡಿಸ್‌ಕ್ವಾಲಿಫೈ ಆಗಿ ಸಿಬಿಐ ಎನ್‌ಕ್ವೈರಿ ಇದೆ ಎನ್ನುವವರನ್ನು ಇಲ್ಲಿ ನೀವು ಡಿಸಿಸಿ ಬ್ಯಾಂಕ್‌ಗೆ ಅಧ್ಯಕ್ಷರನ್ನಾಗಿ ಮಾಡುತ್ತೀರಿ. ಇಂತಹ ನಿರ್ಣಯಗಳನ್ನು ಮಾಡುವವರು, ಗೆದ್ದಿರುವವರನ್ನೆಲ್ಲಾ ಬದಿಗಿಟ್ಟು ನಾಮಿನೇಷನ್ಸ್ ಮಾಡುತ್ತೀರಿ. ಇಂತಹವರನ್ನು ತಾವು ಏನೆಂದು ಕರೆಯಬೇಕು? ಈ

ಶಾಸನ ಸಭೆಯಲ್ಲಿ ಕುಳಿತು ಚರ್ಚೆ ಮಾಡಿದವರಿಗೆಲ್ಲಾ ತಾವು ಹುಡುಕಿಕೊಂಡು ಹೋಗಿ ಅಧಿಕಾರ ಕೊಡುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೇ, ಬ್ಯಾಂಕಿನಿಂದ ಎನ್.ಡಿ.ಸಿ. ಕೊಟ್ಟಿದ್ದಾರೆ. ಆದರೆ ಅವರು ಮೊನ್ನೆ ಪಿ.ಎಲ್.ಡಿ. ಬ್ಯಾಂಕ್ ಚುನಾವಣೆಯಲ್ಲಿ ಡಿಫಾಲ್ಟರ್ಸ್ ಎಂದು ಬಂದಿದೆ. ಎನ್.ಡಿ.ಸಿ. ಇವರು ಏಕೆ ಕೊಟ್ಟರು? ಮತ್ತೆ ಅವರನ್ನು ಸಾಲಗಾರರು ಎಂದು ಮಾಡಿದರೆ ಇದಕ್ಕೆ ಯಾರು ಜವಾಬ್ದಾರರು?

ಅಧ್ಯಕ್ಷರು :— ಎನ್.ಡಿ.ಸಿ. ಕೊಟ್ಟಿರುವುದಿಲ್ಲ. ಶ್ರೀ ಮಾಧುಸ್ವಾಮಿಯವರು ಹೇಳುತ್ತಿರುವುದು ಸರಿಯಾಗಿದೆ. ಸೀನಿಯರ್ ಜಿಯಾಲಜಿಸ್ಟ್ ಬರುತ್ತಾರೆ. ಇನ್ಸ್‌ಪೆಕ್ಷನ್ ಮಾಡಿಕೊಂಡು ಬಂದು ಸರ್ಟಿಫೈ ಮಾಡಿ ಅಸಿಸ್ಟೆಂಟ್ ಕಮೀಷನರ್‌ಗೆ ಕಳುಹಿಸುತ್ತಾರೆ. ಅವರು ಫೈಲ್ ಕ್ಲಿಯರ್ ಮಾಡಿ ಹೇಳುತ್ತಾರೆ, ಫೆಯಿಲ್ಡ್ ವೆಲ್ ಎಂದು. ಬ್ಯಾಂಕ್ ಸಾಲ ಹಾಗೆಯೇ ಇರುತ್ತದೆ, ಇವರು ನೋಟಿಸ್ ಕೊಡುತ್ತಲೇ ಇರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೇ, ಈ ಕೇಸ್ ಹಾಗೆ ಆಗಲಿಲ್ಲ. ತೀರ್ಮಾನ ತೆಗೆದುಕೊಂಡರೂ ಸರ್ಕಾರಕ್ಕೆ ಬಿಲ್ ಮಾಡಲಿಲ್ಲ ಅವರು ಸರ್ಕಾರಕ್ಕೆ ಬಿಲ್ ಮಾಡುವುದಕ್ಕೆ ಮೊದಲೇ ಜಿಯಾಲಜಿಸ್ಟ್ ಟ್ರಾನ್ಸ್‌ಫರ್ ಆಗಿ ಹೋದರು. ಈ ಸ್ಟ್ಯಾಫ್ ಇದ್ದವರು ತೀರ್ಮಾನ ಆಗಿದೆ ಎಂದು ಹೇಳಿ ಅವರ ಹತ್ತಿರ ಇವರು ದುಡ್ಡು ತೆಗೆದುಕೊಂಡು ಎನ್.ಡಿ.ಸಿ. ಕೊಟ್ಟುಬಿಟ್ಟರು.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಈ ಪ್ರಕರಣದಲ್ಲಿ ಇಲ್ಲಿ ತಾವು ಹೇಳುವ ರೀತಿ ಆಗಿಲ್ಲ. ತಾವು ಹೇಳಿದ ರೀತಿಯಲ್ಲಿ ಕೆಲವು ಕಡೆ ಆಗಿದೆ ಇಲ್ಲವೆಂದು ನಾನು ಹೇಳುವುದಿಲ್ಲ. ನಾನು ನಮ್ಮಲ್ಲಿಯೇ ಡಿ.ಸಿ. ಕಛೇರಿಗೆ ವಿಸಿಟ್ ಮಾಡಿ, ಏಕೆ ಅಡ್ಜಸ್ಟ್ ಮಾಡಿಲ್ಲ ಎಂದು ಕೇಳಿದರೆ ಅವನು 5 ವರ್ಷದ ಮೇಲೆ ಏನೋ ಒಂದು ಸಬೂಬು ಬರೆದು ಒಳಗೆ ಹಾಕಿಬಿಟ್ಟ. ಆಮೇಲೆ ಅವನನ್ನು ಸಸ್ಪೆಂಡ್ ಕೂಡ ಮಾಡಿದ್ದೇವೆ. ಇದು ನಡೆಯುತ್ತದೆ, ನಾನು ಇಲ್ಲವೆಂದು ಹೇಳುವುದಿಲ್ಲ. ಈ ಕೇಸ್‌ನಲ್ಲಿ ಏನಾಗಿದೆ ಅಂದರೆ ಅಲ್ಲಿ ಸುಮಾರು 45 ವಿಫಲ ಬಾವಿಗಳು ಇವೆ. ಅವರು ಏನು ಮಾಡಿದ್ದಾರೆಂದರೆ ವಿಫಲ ಬಾವಿ ಎಂದು ಮಾಡಿ ಪ್ರಾಧಿಕಾರಕ್ಕೆ ಅರ್ಜಿಯನ್ನೇ ಕೊಟ್ಟಿಲ್ಲ. ಆಮೇಲೆ ಅವರೇ ಜಮಾ ಖರ್ಚು ಮಾಡಿಕೊಂಡಿದ್ದಾರೆ. ಅದಕ್ಕೆ ಅವರು ಎನ್.ಡಿ.ಸಿ. ಕೊಟ್ಟಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ನಮಗೆ ಬಂದಿರುವ ಉತ್ತರದ ಪ್ರಕಾರ ಅವರು ಏನು ಹೇಳುತ್ತಾರೆಂದರೆ ನಾವು ಅದನ್ನು ಮಾಡಿಯೇ ಇಲ್ಲ. ಯಾವುದೇ ರೀತಿಯ ಜಮಾ ಖರ್ಚು ಮಾಡಿಕೊಂಡಿಲ್ಲ. ಅವರ ಹೆಸರಿನಲ್ಲಿ ಸಾಲ ಹಾಗೆಯೇ ಇದೆ ಎಂದು ನಮಗೆ ಉತ್ತರ ಬಂದಿದೆ. ತಾವು ಹೇಳಿದಂತೆ ಏನಾದರೂ ಇದ್ದರೆ ಖಂಡಿತವಾಗಿ ನಾನು ಸೂಕ್ತವಾದ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :— ಮಾನ್ಯ ಅಧ್ಯಕ್ಷರೆ, ಅವರು ಆ ದಿನ ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಈ ಉತ್ತರ ಕೊಟ್ಟಿಲ್ಲವೆಂದರೆ ನಾನು ಮತ್ತೆ ಈ ಸದನದಲ್ಲಿ ಈ ವಿಷಯದಲ್ಲಿ ಪ್ರಶ್ನೆ ಕೇಳುವುದಿಲ್ಲ. ಅದೇ ಸೆಕ್ರಟರಿ ನಿಂತುಕೊಂಡು ಜನರಲ್‌ಬಾಡಿ ಮೀಟಿಂಗ್ ನಲ್ಲಿ ನಮಗೆ ಈ ಉತ್ತರ ಕೊಟ್ಟರು. ಅದೇ ಬ್ಯಾಂಕಿನ ಅಧ್ಯಕ್ಷರು ಜನರಲ್ ಬಾಡಿ ಮೀಟಿಂಗ್‌ನಲ್ಲಿ ನಿಂತುಕೊಂಡು ಚಿಕ್ಕನಾಯಕನಹಳ್ಳಿ ಪಿ.ಎಲ್.ಡಿ. ಬ್ಯಾಂಕಿನಲ್ಲಿ ಈ ಮಾತು ಹೇಳಿದರು. ನಾನು ಆ ಕ್ಷೇತ್ರದ ಶಾಸಕ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಕುಳಿತಿದ್ದವನು. ನಾನು ಇಲ್ಲಿ ಈ ಪ್ರಶ್ನೆ ಕೇಳಿದಾಗ ಈ ರೀತಿಯ ಉತ್ತರ ಕಳುಹಿಸುತ್ತಾರೆಂದರೆ ಹೇಗೆ. ಸರ್ಕಾರದ ಬಗ್ಗೆ ಗೌರವವನ್ನು ಬ್ಯಾಂಕ್ ಸ್ಟ್ಯಾಫ್ ಎಷ್ಟು ಇಟ್ಟುಕೊಂಡಿದ್ದಾರೆಂದು ತಾವು ಯೋಚನೆ ಮಾಡಿ. ನಾನೇ ಪ್ರಶ್ನೆ ಕೇಳಿದ್ದೇನೆಂದು ಅವರಿಗೆ ಗೊತ್ತಾಗಬೇಕಾಗಿತ್ತು. ನಾನು ಆ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಹಾಜರಿದ್ದೇನೆ. ಆಡಿಟ್ ರಿಪೋರ್ಟ್ ಮೇಲೆ ತಕರಾರು ತೆಗೆದುಕೊಂಡಿದ್ದೇನೆ. ಯಾರು ಈ ಬೇಜವಾಬ್ದಾರಿಗೆ ಕಾರಣ ಎಂಬುದನ್ನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ನಾಳೆಯೇ ನಾನು ಒಬ್ಬ ಸ್ಪೆಷಲ್ ಆಫೀಸರ್‌ನ್ನು ಕಳುಹಿಸಿ ಅದನ್ನು ವೆರಿಫೈ ಮಾಡಿಸಿ, ನಿಶ್ಚಿತವಾಗಿ ಅವರ ಮೇಲೆ ಕಾಯ್ದೆ ಪ್ರಕಾರ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೇನೆ.

ಬೈಲಹೊಂಗಲದಲ್ಲಿ ಹೊಸ ಬಸ್ ಮಾರ್ಗಗಳು.

335(2204) ಶ್ರೀ ಕೌಜಲಗಿ ಮಹಂತೇಸ್ ಶಿವಾನಂದ, (ಬೈಲಹೊಂಗಲ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ಘಟಕದಿಂದ 1) ಬೈಲಹೊಂಗಲ ಹಿರೇಬ್ಯುನೂರು2) ಬೈಲಹೊಂಗಲ ಚಚಡಿ (ವಾಯಾ ತೆನಿಕೊಳ್ಳ) 3) ಬೈಲಹೊಂಗಲ ಹೊಳಿನಾಗಲಾಪುರ (ವಾಯಾ ಕಂಗನೂರ, ಸಂಗೋಳ್ಳಿ ಗುಡದೂರ) 4) ಬೈಲಹೊಂಗಲ ಚಚಡಿ ಉಪ್ಪಿನ ಬಟ್ಟಗೇರಿ ಈ ಸ್ಥಳಗಳಿಗೆ ಹೊಸ ಬಸ್ ಸಂಚಾರಗಳನ್ನು ಪ್ರಾರಂಭಿಸಬೇಕೆಂಬ ಸಾರ್ವಜನಿಕರ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಈ ಹೊಸ ಬಸ್ ಸಂಚಾರವನ್ನು ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) :—

ಅ) ಬಂದಿದೆ.